SN – 093

# III ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ನವೆಂಬರ್/ಡಿಸೆಂಬರ್ 2013
## (ರಿಪೀಟರ್ಸ್) (2011-12 Only)
## ಕನ್ನಡ ಭಾಷಾ ಪತ್ರಿಕೆ – III
## ಸಾಹಿತ್ಯ ಸಲ್ಲಾಪ – ೨ ಮತ್ತು ವ್ಯಾವಹಾರಿಕ ಕನ್ನಡ

Time : 3 Hours

Max. Marks : 90

### ಭಾಗ – ೧
### ಸಾಹಿತ್ಯ ಸಲ್ಲಾಪ – ೨

I. ಈ ಪದ್ಯದ ಭಾವಾರ್ಥ ಬರೆಯಿರಿ. (1×5=5)

ಎನ್ನಂ ವಂಚಿಸಿ ಬಂದುದ
ಜೆನ್ನಿನಗಿನಿತಾಯ್ತುವಸ್ಥೆ ಕುರುರಾಜಾ ನೀ
ನಿನ್ನುಂ ಪತಿಕಾರ್ಯಮನ ಱು
ತೆನ್ನಂ ನೋಡೆನ್ನ ಶಕ್ತಿಯಂ ಭಕ್ತಿಯುಮಂ

II. ಇವುಗಳಲ್ಲಿ ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. (3×5=15)

1) ಉಪ ಪಾಂಡವರ ಹತ್ಯೆಗೆ ದುರ್ಯೋಧನನ ಪ್ರತಿಕ್ರಿಯೆ ಏನು ?
2) 'ಇಬ್ಬರು ರೈತರು' ಕವಿತೆಯ ಆಶಯವನ್ನು ಕುರಿತು ಬರೆಯಿರಿ.
3) 'ತಲೆದಂಡ' ನಾಟಕದಲ್ಲಿನ ಬಸವಣ್ಣನ ಪಾತ್ರದ ವೈಶಿಷ್ಟ್ಯವನ್ನು ಕುರಿತು ಬರೆಯಿರಿ.
4) 'ಕಳ್ಳು ಬಳ್ಳಿ' ಕತೆಯ ಮಾನವೀಯ ಸಂಬಂಧಗಳನ್ನು ಕುರಿತು ಬರೆಯಿರಿ.
5) ಸಂಸ್ಕೃತಿಯನ್ನು ಕುರಿತು ಕಾರಂತರ ನಿಲುವುಗಳೇನು ? ವಿವರಿಸಿ.

III. ಇವುಗಳಲ್ಲಿ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. (3×10=30)

1) 'ನಿನ್ನಿಂ ನಿಕೃಷ್ಟರೆಂಬುರುವೊಳರೇ' – ಕಾವ್ಯ ಭಾಗದಲ್ಲಿ ಪ್ರಕಟವಾಗಿರುವ ಅಶ್ವತ್ಥಾಮನ ಸ್ವಾಮಿಭಕ್ತಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ.
2) 'ಇಬ್ಬರು ರೈತರು' ಕವಿತೆಯ ವೈಶಿಷ್ಟ್ಯವನ್ನು ಕುರಿತು ಬರೆಯಿರಿ.
3) 'ಸಂಬಂಧಗಳು ಸಾಯುವುದು ಶ್ರೀಮಂತಿಕೆ ಬಂದಾಗ' – ಈ ಹೇಳಿಕೆಯನ್ನು 'ಕಳ್ಳುಬಳ್ಳಿ' ಕತೆಯ ಹಿನ್ನೆಲೆಯಲ್ಲಿ ಚರ್ಚಿಸಿ.
4) ಜಗದೇವ, ಬಿಜ್ಜಳ, ಮಂಚ್ಯಣ, ಕ್ರಮಿತ ಇವರಲ್ಲಿ ಇಬ್ಬರ ಪಾತ್ರವನ್ನು ಪರಿಚಯಿಸಿ.
5) 'ಕೈ ಹಿಡಿದವರು' ಪ್ರಬಂಧದ ಆಶಯವೇನು ? ಸ್ಪಷ್ಟಪಡಿಸಿ.

## ಭಾಗ - ೨
## ವ್ಯಾವಹಾರಿಕ ಕನ್ನಡ

I. ಮೂರಕ್ಕೆ ಸಂಕ್ಷಿಪ್ತ ಉತ್ತರ ಬರೆಯಿರಿ. (3×5=15)

1) ಬದಲಾಗುತ್ತಿರುವ ಕನ್ನಡ ಭಾಷೆಯ ಸ್ವರೂಪ

2) ಅಂತರ್ಜಾಲ

3) ಲಿಪಿ ಮತ್ತು ತಂತ್ರಜ್ಞಾನ

4) ಸುತ್ತೋಲೆ

5) ಓದುಗರ ಪತ್ರ.

II. ಈ ಗದ್ಯ ಭಾಗವನ್ನು ಸಂಕ್ಷಿಪ್ತಗೊಳಿಸಿ ಶೀರ್ಷಿಕೆಯನ್ನು ಬರೆಯಿರಿ. (1×5=5)

ನಮ್ಮ ಉಪ್ಪರಿಗೆ ಪೂರ್ವದಿಕ್ಕಿಗೆ ತೆರೆದು ಕೊಂಡಿದೆ ಉಳಿದೆಲ್ಲ ದಿಕ್ಕಿಗೂ ಗೋಡೆ ಕಿಟಕಿಗಳಿವೆ. ಅಲ್ಲಿ ಕುಳಿತು ನೋಡಿದರೆ ನಮ್ಮೆದುರಾಗಿ ಇಳಿಜಾರಾಗಿ ಮೇಲೆದ್ದಿರುವ ಅನಂತ ನಿಬಿಡಾರಣ್ಯ ಶ್ರೇಣಿಗಳು ಗಂಭೀರವಾಗಿ ಸುಂದರವಾಗಿ ರಂಜಿಸುವುವು. ಅಲ್ಲಿ ನಮಗೆ ತಿಳಿಯುತ್ತದೆ. ಹಸುರು ಬಣ್ಣದಲ್ಲಿ ಎಷ್ಟು ಬಗೆಗಳಿರಬಹುದೆಂದು, ಆ ಗಿರಿಗಳಾಚೆಯಲ್ಲಿ ನೀಲಾಕಾಶವು ಪಾತಾಳದಲ್ಲಿ ನಿಂತು ಸ್ವರ್ಗವನ್ನು ಇಣಿಕಿ ನೋಡುವಂತೆ ಧೀರ ಗಂಭೀರವಾಗಿರುವುದು. ಈ ಗಿರಿಶಿಖರ ರೇಖೆಯಲ್ಲಿ ಇತರ ವೃಕ್ಷಗಳಿಗಿಂತ ಹಿರಿದಾಗಿ ಎತ್ತರವಾಗಿ ಬೆಳೆದ ಹೆಮ್ಮರಗಳು ಆಕಾಶ ಪಟದಲ್ಲಿ ಬರೆದು ಕೆತ್ತಿ ಮೆತ್ತಿದ ಸಜೀವ ಚಿತ್ರಗಳಂತೆ ತೋರಿ, ವಿಶ್ವವರ್ಣ ಶಿಲ್ಪಿಯ ವರ್ಣನಾ ವೈಖರಿಯ ಕಲಾಕೌಶಲವನ್ನು ಸಾರುವ ಗೆಲ್ಗಂಬಗಳ ಮೇಲೆ ಹಾರಾಡುವ ಶ್ಯಾಮಲ ಕೇತನಗಳಂತೆ ಕಂಗೊಳಿಸುವುವು. ಆದೃಶ್ಯ ದಿನದಿನಕ್ಕೂ ಹೊತ್ತು ಹೊತ್ತಿಗೂ ಸೌಂದರ್ಯದಿಂದ ನಲಿಯುವುದು. ಅದು ಅನಂತ ಕವಿ ಅನಂತಾನಂತ ಕವನಗಳನ್ನು ವಿರಚಿಸುವ ಕಾವ್ಯರಂಗದಂತೆ ಮೆರೆಯುವುದು.

III. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. (2×10=20)

1) ವ್ಯವಹಾರ ಪತ್ರ ಎಂದರೇನು ? ಅದರ ಲಕ್ಷಣಗಳನ್ನು ಕುರಿತು ಬರೆಯಿರಿ.

2) ನಿಮ್ಮ ಸಂಶೋಧನೆಗೆ ಸಂಬಂಧ ಪಟ್ಟ ವಿವರಗಳು ಲಭ್ಯವಿರುವ ಸಂಸ್ಥೆಯೊಂದಕ್ಕೆ ವಿವರಗಳನ್ನು ಕೋರಿ ಒಂದು ಸಾಮಾನ್ಯ ವಿಚಾರಣಾ ಪತ್ರವನ್ನು ಸಿದ್ಧಪಡಿಸಿ.

3) ಕಾಲೇಜಿನ ಪ್ರಾಂಶುಪಾಲರು ಸಂಸ್ಥೆಯ ಆವರಣದಲ್ಲಿ ವಿದ್ಯಾರ್ಥಿಗಳಿಗೆ ಶಿಸ್ತು ಪಾಲಿಸಬೇಕೆಂದು ನಿರ್ದೇಶಿಸುವ ಸುತ್ತೋಲೆಯೊಂದನ್ನು ಸಿದ್ಧಪಡಿಸಿ.

4) ಕನ್ನಡ ಉಪನ್ಯಾಸಕರ ಹುದ್ದೆಯನ್ನು ಗಮನದಲ್ಲಿರಿಸಿಕೊಂಡು ಒಂದು ಅಭ್ಯರ್ಥನ ಪತ್ರದ ಮಾದರಿಯೊಂದನ್ನು ಸಿದ್ಧಪಡಿಸಿ.

---